**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.ಸಂಖ್ಯೆ :1023/2025**

ಪಿರ್ಯಾದಿ : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಬಣಕಲ್.

ವಿರುದ್ಧ

ಆರೋಪಿ : ಶ್ರೀ ರಾಮಕೃಷ್ಣ ಯಾನೆ ಪುಟ್ಟಣ್ಣ,
ವಯಸ್ಸು ಸುಮಾರು 50 ವರ್ಷ,
ಬಿನ್ ಈರೇಗೌಡ, ವಾಸ: ಬಕ್ಕಿ ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು.

ದೋಷಾರೋಪಣೆ

ಶ್ರೀಮತಿ ಸುರಕ್ಷ ಕೆ.ಕೆ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:-

ದಿನಾಂಕ 21.01.2025 ರಂದು ಮಧ್ಯಾಹ್ನ 02.15 ಗಂಟೆಗೆ ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ಮೂಡಿಗೆರೆ ತಾಲ್ಲೂಕು ಬಣಕಲ್ ಹೋಬಳಿಯ ಬಕ್ಕಿ ಗ್ರಾಮ ದಾಖಲೆ, ಬಕ್ಕಿ ಗ್ರಾಮದ ಸರ್ವೆ ನಂ.130 ರಲ್ಲಿ ಆರೋಪಿಯಾದ ನೀವು ನಿಮಗೆ ಸೇರಿದ ಕಾಫಿ/ಅಡಿಕೆ ತೋಟದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯತನದಿಂದ ಚಾಸಾ-2 ತಮ್ಮಯ್ಯ ರವರಿಗೆ ಸುಮಾರು 30 ರಿಂದ 35 ಅಡಿ ಎತ್ತರದ ಅಡಿಕೆ ಮರವನ್ನು ಬರಿಗಾಲಿನಲ್ಲಿ ಹತ್ತಿ ಕೋಲಿನಿಂದ ಫಸಲನ್ನು ತೆಗೆಯಲು ತಿಳಿಸಿದ್ದು, ಅದರಂತೆ ಚಾಸಾ-2 ರವರು ಫಸಲನ್ನು ತೆಗೆಯುತ್ತಿರುವಾಗ ಅಡಿಕೆ ಮರದಿಂದ ಆಯತಪ್ಪಿ ಕೆಳಗೆ ಬಿದ್ದ ಪರಿಣಾಮ ಬೆನ್ನಿಗೆ, ಎದೆಗೆ ತೀವ್ರ ಪೆಟ್ಟಾಗಿ, ಬೆನ್ನಿನ ಮೂಳೆ ಮುರಿದಿರುತ್ತದೆ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **125(ಬಿ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ**,** ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ**.**

ಪ್ರ: 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

ಉತ್ತರ:

ಪ್ರ: 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ:

(ಆರೋಪಿಗೆ ದಿನಾಂಕ 31.07.2025 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ಸಹಿ/-

ಮೂಡಿಗೆರೆ<br>ದಿನಾಂಕ: 31.07.2025.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು<br>ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.